Test Paper : II

Test Subject : **KANNADA**

Test Subject Code : **K-0215**

Test Booklet Serial No. : ____________________

OMR Sheet No. : ____________________

Roll No. | | | | | | | | |

(Figures as per admission card)

@raghu

**Name & Signature of Invigilator/s**

Signature : ____________________

Name : ____________________

**Paper : II**

**Subject : KANNADA**

Time : 1 Hour 15 Minutes

Maximum Marks : 100

Number of Pages in this Booklet : **8**

Number of Questions in this Booklet : **50**

**ಅಭ್ಯರ್ಥಿಗಳಿಗೆ ಸೂಚನೆಗಳು**

1. ಈ ಪುಟದ ಮೇಲ್ತುದಿಯಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರೋಲ್ ನಂಬರನ್ನು ಬರೆಯಿರಿ.
2. ಈ ಪತ್ರಿಕೆಯು ಬಹು ಆಯ್ಕೆ ವಿಧದ ಐವತ್ತು ಪ್ರಶ್ನೆಗಳನ್ನು ಒಳಗೊಂಡಿದೆ.
3. ಪರೀಕ್ಷೆಯ ಪ್ರಾರಂಭದಲ್ಲಿ, ಪ್ರಶ್ನೆಪುಸ್ತಿಕೆಯನ್ನು ನಿಮಗೆ ನೀಡಲಾಗುವುದು. ಮೊದಲ 5 ನಿಮಿಷಗಳಲ್ಲಿ ನೀವು ಪುಸ್ತಿಕೆಯನ್ನು ತೆರೆಯಲು ಮತ್ತು ಕೆಳಗಿನಂತೆ ಕಡ್ಡಾಯವಾಗಿ ಪರೀಕ್ಷಿಸಲು ಕೋರಲಾಗಿದೆ.
   (i) ಪ್ರಶ್ನೆ ಪುಸ್ತಿಕೆಗೆ ಪ್ರವೇಶಾವಕಾಶ ಪಡೆಯಲು, ಈ ಹೊದಿಕೆ ಪುಟದ ಅಂಚಿನ ಮೇಲಿರುವ ಪೇಪರ್ ಸೀಲನ್ನು ಹರಿಯಿರಿ. ಸ್ಟಿಕ್ಕರ್ ಸೀಲ್ ಇಲ್ಲದ ಅಥವಾ ತೆರೆದ ಪುಸ್ತಿಕೆಯನ್ನು ಸ್ವೀಕರಿಸಬೇಡಿ.
   (ii) ಪುಸ್ತಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆಯನ್ನು ಮುಖಪುಟದ ಮೇಲೆ ಮುದ್ರಿಸಿದ ಮಾಹಿತಿಯೊಂದಿಗೆ ತಾಳೆ ನೋಡಿರಿ. ಪುಟಗಳು/ಪ್ರಶ್ನೆಗಳು ಕಾಣೆಯಾದ, ಅಥವಾ ದ್ವಿಪ್ರತಿ ಅಥವಾ ಅನುಕ್ರಮವಾಗಿಲ್ಲದ ಅಥವಾ ಇತರ ಯಾವುದೇ ವ್ಯತ್ಯಾಸದ ದೋಷಪೂರಿತ ಪುಸ್ತಿಕೆಯನ್ನು ಕೂಡಲೆ 5 ನಿಮಿಷದ ಅವಧಿ ಒಳಗೆ, ಸಂವೀಕ್ಷಕರಿಂದ ಸರಿ ಇರುವ ಪುಸ್ತಿಕೆಗೆ ಬದಲಾಯಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆ ಪತ್ರಿಕೆಯನ್ನು ಬದಲಾಯಿಸಲಾಗುವುದಿಲ್ಲ, ಯಾವುದೇ ಹೆಚ್ಚು ಸಮಯವನ್ನೂ ಕೊಡಲಾಗುವುದಿಲ್ಲ.
4. ಪ್ರತಿಯೊಂದು ಪ್ರಶ್ನೆಗೂ (A), (B), (C) ಮತ್ತು (D) ಎಂದು ಗುರುತಿಸಿದ ನಾಲ್ಕು ಪರ್ಯಾಯ ಉತ್ತರಗಳಿವೆ. ನೀವು ಪ್ರಶ್ನೆಯ ಎದುರು ಸರಿಯಾದ ಉತ್ತರದ ಮೇಲೆ, ಕೆಳಗೆ ಕಾಣಿಸಿದಂತೆ ಅಂಡಾಕೃತಿಯನ್ನು ಕಪ್ಪಾಗಿಸಬೇಕು.
   ಉದಾಹರಣೆ: (A) (B) ● (D)
   (C) ಸರಿಯಾದ ಉತ್ತರವಾಗಿದ್ದಾಗ.
5. ಪ್ರಶ್ನೆ ಪತ್ರಿಕೆ I ರಲ್ಲಿ ಕೊಟ್ಟಿರುವ OMR ಉತ್ತರ ಹಾಳೆಯಲ್ಲಿ, ಪ್ರಶ್ನೆ ಪತ್ರಿಕೆ I ಮತ್ತು ಪ್ರಶ್ನೆ ಪತ್ರಿಕೆ II ರಲ್ಲಿ ಇರುವ ಪ್ರಶ್ನೆಗಳಿಗೆ ನಿಮ್ಮ ಉತ್ತರಗಳನ್ನು ಸೂಚಿಸತಕ್ಕದ್ದು. OMR ಉತ್ತರ ಹಾಳೆಯಲ್ಲಿ ಅಂಡಾಕೃತಿಯಲ್ಲದೆ ಬೇರೆ ಯಾವುದೇ ಸ್ಥಳದಲ್ಲಿ ಉತ್ತರವನ್ನು ಗುರುತಿಸಿದರೆ, ಅದರ ಮೌಲ್ಯಮಾಪನ ಮಾಡಲಾಗುವುದಿಲ್ಲ.
6. OMR ಉತ್ತರ ಹಾಳೆಯಲ್ಲಿ ಕೊಟ್ಟ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ.
7. ಎಲ್ಲಾ ಕರಡು ಕೆಲಸವನ್ನು ಪುಸ್ತಿಕೆಯ ಕೊನೆಯಲ್ಲಿ ಮಾಡತಕ್ಕದ್ದು.
8. ನಿಮ್ಮ ಗುರುತನ್ನು ಬಹಿರಂಗಪಡಿಸಬಹುದಾದ ನಿಮ್ಮ ಹೆಸರು ಅಥವಾ ಯಾವುದೇ ಚಿಹ್ನೆಯನ್ನು, ಸಂಗತವಾದ ಸ್ಥಳ ಹೊರತು ಪಡಿಸಿ, OMR ಉತ್ತರ ಹಾಳೆಯ ಯಾವುದೇ ಭಾಗದಲ್ಲಿ ಬರೆದರೆ, ನೀವು ಅನರ್ಹತೆಗೆ ಬಾಧ್ಯರಾಗಿರುತ್ತೀರಿ.
9. ಪರೀಕ್ಷೆಯು ಮುಗಿದನಂತರ, ಕಡ್ಡಾಯವಾಗಿ OMR ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ನೀವು ಹಿಂತಿರುಗಿಸಬೇಕು ಮತ್ತು ಪರೀಕ್ಷಾ ಕೊಠಡಿಯ ಹೊರಗೆ OMR ನ್ನು ನಿಮ್ಮೊಂದಿಗೆ ಕೊಂಡೊಯ್ಯಕೂಡದು.
10. ಪರೀಕ್ಷೆಯ ನಂತರ, ಪರೀಕ್ಷಾ ಪ್ರಶ್ನೆಪತ್ರಿಕೆಯನ್ನು ಮತ್ತು ನಕಲು OMR ಉತ್ತರ ಹಾಳೆಯನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.
11. ನೀಲಿ/ಕಪ್ಪು ಬಾಲ್‌ಪಾಯಿಂಟ್ ಪೆನ್ ಮಾತ್ರವೇ ಉಪಯೋಗಿಸಿರಿ.
12. ಕ್ಯಾಲ್ಕುಲೇಟರ್ ಅಥವಾ ಲಾಗ್ ಟೇಬಲ್ ಇತ್ಯಾದಿಯ ಉಪಯೋಗವನ್ನು ನಿಷೇಧಿಸಲಾಗಿದೆ.
13. ಸರಿ ಅಲ್ಲದ ಉತ್ತರಗಳಿಗೆ ಋಣ ಅಂಕ ಇರುವುದಿಲ್ಲ.
14. ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ಪ್ರಶ್ನೆ ಪತ್ರಿಕೆಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಕಂಡುಬಂದಲ್ಲಿ, ಇಂಗ್ಲೀಷ್ ಆವೃತ್ತಿಗಳಲ್ಲಿರುವುದೇ ಅಂತಿಮವೆಂದು ಪರಿಗಣಿಸಬೇಕು.

**Instructions for the Candidates**

1. Write your roll number in the space provided on the top of this page.
2. This paper consists of fifty multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of the cover page. Do not accept a booklet without sticker seal or open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
4. Each item has four alternative responses marked (A), (B), (C) and (D). You have to darken the oval as indicated below on the correct response against each item.
   **Example :** (A) (B) ● (D)
   where (C) is the correct response.
5. Your responses to the questions are to be indicated in the **OMR Sheet kept inside the Paper I Booklet only**. If you mark at any place other than in the ovals in the Answer Sheet, it will not be evaluated.
6. Read the instructions given in OMR carefully.
7. Rough Work is to be done in the end of this booklet.
8. If you write your name or put any mark on any part of the OMR Answer Sheet, except for the space allotted for the relevant entries, which may disclose your identity, you will render yourself liable to disqualification.
9. You have to return the test OMR Answer Sheet to the invigilators at the end of the examination compulsorily and must NOT carry it with you outside the Examination Hall.
10. You can take away question booklet and carbon copy of OMR Answer Sheet soon after the examination.
11. **Use only Blue/Black Ball point pen.**
12. **Use of any calculator or log table etc., is prohibited.**
13. **There is no negative marks for incorrect answers.**
14. **In case of any discrepancy found in the Kannada translation of a question booklet the question in English version shall be taken as final.**



Use E-Papers, Save Trees
above line hide when print out

Scanned with CamScanner

# ಕನ್ನಡ
## ಪತ್ರಿಕೆ – II

**ಸೂಚನೆಗಳು :** ಈ ಪತ್ರಿಕೆಯು **(50)** ಐವತ್ತು ವಸ್ತುನಿಷ್ಠ ಮಾದರಿಯ ಪ್ರಶ್ನೆಗಳನ್ನೊಳಗೊಂಡಿದ್ದು, **ಪ್ರತಿಯೊಂದು** ಪ್ರಶ್ನೆಯೂ **ಎರಡು (2)** ಅಂಕಗಳನ್ನು ಹೊಂದಿದೆ. **ಎಲ್ಲಾ** ಪ್ರಶ್ನೆಗಳನ್ನೂ **ಕಡ್ಡಾಯವಾಗಿ** ಉತ್ತರಿಸಬೇಕು.

**1.** ಹಲ್ಮಿಡಿ ಶಾಸನವನ್ನು ಸಂಪಾದಿಸಿ ಪ್ರಕಟಿಸಿದವರು
(A) ಜೆ. ಎಫ್. ಫ್ಲೀಟ್
(B) ಎಂ. ಹೆಚ್. ಕೃಷ್ಣ
(C) ಸೀತಾರಾಮ್ ಜಾಗಿರ್‌ದಾರ್
(D) ಕೆ. ವಿ. ರಮೇಶ್

**2.** ಕನ್ನಡದ ಪ್ರಾಚೀನ ಪದಗಳು ಸಿಕ್ಕಿರುವ ಗ್ರಂಥ
(A) ಆಕ್ಸಿರ್ ಭಾಷೆಯ ಪ್ರಹಸನ
(B) ಹಲ್ಮಿಡಿ ಶಾಸನ
(C) ಗಾಥಾಸಪ್ತಸತಿ
(D) ಕವಿರಾಜಮಾರ್ಗ

**3.** 'ಕದಡಿದ ಸಲಿಲಂ ತಿಳಿವಂದದೆ ತನ್ನಿಂ ತಾನೆ ತಿಳಿದ ದಶವದನಂಗಾದುದು ವೈರಾಗ್ಯಂ' – ಈ ಸಾಲುಗಳಿರುವ ಕೃತಿ
(A) ಸಾಳ್ವ ಭಾರತ
(B) ಪಂಪರಾಮಾಯಣ
(C) ನೇಮಿನಾಥ ಪುರಾಣ
(D) ತೊರವೆ ರಾಮಾಯಣ

**4.** ಚಾಲುಕ್ಯ ಚಕ್ರವರ್ತಿ ಜಗದೇಕಮಲ್ಲ ಜಯಸಿಂಹನ ಕಾಲದಲ್ಲಿ ಸಂಧಿ ವಿಗ್ರಹಿಯಾಗಿದ್ದ ಕವಿ
(A) ದುರ್ಗಸಿಂಹ
(B) ವೃತ್ತವಿಲಾಸ
(C) ಜನ್ನ
(D) ಅಗ್ಗಳ

**5.** ''ಕುಲವೊಂದೆ ಕುಲವಾಗೆ ಗೋತ್ರವಂತನುವಾಗೆ ನೆಲೆ ವಿಚಾರಿಸೆ ತನ್ನ ಸಂಬಂಧವೊಂದಾಗೆ'' – ಈ ಉಕ್ತಿಯು ಬಂದಿರುವ ಕೃತಿ
(A) ಕುಮಾರವ್ಯಾಸ ಭಾರತ
(B) ಹರಿಶ್ಚಂದ್ರ ಕಾವ್ಯ
(C) ವಿಕ್ರಮಾರ್ಜುನ ವಿಜಯ
(D) ಬಸವರಾಜದೇವರ ರಗಳೆ

**6.** ''ಭಸ್ಮವ ಹೂಸಿ ಬತ್ತಲೆ ಇದ್ದರೇನು ಬ್ರಹ್ಮಚಾರಿಯೇ ?'' – ಎಂದವನು
(A) ಜೇಡರ ದಾಸಿಮಯ್ಯ
(B) ಅಲ್ಲಮ ಪ್ರಭು
(C) ಬಸವಣ್ಣ
(D) ಅಕ್ಕಮಹಾದೇವಿ

**7.** ಪುರಂದರದಾಸರು ಮತ್ತು ಅನ್ನಮಯ್ಯರು ಭೇಟಿಯಾದ ಸ್ಥಳ
(A) ಶ್ರೀಶೈಲ (B) ಹಂಪೆ
(C) ಮಂತ್ರಾಲಯ (D) ತಿರುಮಲ

**8.** 'ಅಪ್ರತಿಮ ವೀರ ಚರಿತೆ' – ಈ ಕೃತಿಯ ಕರ್ತೃ
(A) ಚಿಕ್ಕುಪಾಧ್ಯಾಯ
(B) ಮುಮ್ಮಡಿ ಕೃಷ್ಣರಾಜ ಒಡೆಯರ್
(C) ತಿರುಮಲಾರ್ಯ
(D) ಗೋವಿಂದ ವೈದ್ಯ

**9.** 'ಎಲಿಜಿ' ಗೆ ಸಂವಾದಿಯಾಗಿ ಹೀಗೆನ್ನುತ್ತಾರೆ
(A) ಪ್ರಗಾಥ (B) ವಿಡಂಬನ ಗೀತೆ
(C) ಶೋಕಗೀತೆ (D) ಖಂಡಕಾವ್ಯ

**10.** 'ನಾದಲೀಲೆ' ಕವನ ಸಂಕಲನದಲ್ಲಿರುವ ಕವಿತೆ
(A) ಚಂದ್ರ (B) ಚಳಿಯಾಕೆ
(C) ಹುಬ್ಬಳ್ಳಿಯಾಂವ (D) ಬೆಳದಿಂಗಳು ನೋಡಾ

**11.** ಡಿ. ಎಲ್. ನರಸಿಂಹಾಚಾರ್ಯರ ಅಭಿನಂದನಾ ಗ್ರಂಥ
(A) ಸಂಭಾವನೆ (B) ಉಪಾಯನ
(C) ಬೆಳ್ವೊಲ (D) ದಿಬ್ಬಣ

**12.** 'ಏಣಿ ಮೆಟ್ಟಿಲುಗಳು' – ಕೃತಿಯ ಕರ್ತೃ
(A) ಸುಬ್ರಮಣ್ಯ ಭಾರತಿ
(B) ವಿಶ್ವನಾಥ ಸತ್ಯನಾರಾಯಣ
(C) ಪ್ರೇಮಚಂದ್
(D) ತಕಳಿ ಶಿವಶಂಕರ ಪಿಳ್ಳೈ



Use E-Papers, Save Trees
above line hide when print out

Scanned with CamScanner

@raghu



13. ''ಧ್ವನಿಯೆಂಬುದಳಂಕಾರಂ' – ಎಂಬ ವಾಕ್ಯವಿರುವ ಕೃತಿ
(A) ಕವಿರಾಜಮಾರ್ಗ (B) ಧ್ವನ್ಯಾಲೋಕ
(C) ಕಾವ್ಯಾಲಂಕಾರ (D) ಶಬ್ದಾನುಶಾಸನ

14. 'ಪ್ರಜ್ಞಾನವನವೋನ್ಮೇಷಶಾಲಿನೀ ಪ್ರತಿಭಾಮತ' – ಈ ಹೇಳಿಕೆ ಇರುವ ಕೃತಿ
(A) ಕಾವ್ಯಮಿಮಾಂಸೆ (B) ಕಾವ್ಯಾಲಂಕಾರ
(C) ಕಾವ್ಯಕೌತುಕ (D) ಸಾಹಿತ್ಯದರ್ಪಣ

15. 'Lives of poets' – ಯಾರ ಕೃತಿ ?
(A) ಡ್ರೈಡನ್
(B) ಸ್ಯಾಮುಯಲ್ ಜಾನ್‌ಸನ್
(C) ವರ್ಡ್ಸ್‌ವರ್ತ್
(D) ಶೆಲ್ಲಿ

16. 'Role Shifting' – ಈ ಪರಿಭಾಷೆಯು ವ್ಯಕ್ತಗೊಳ್ಳುವ ಪಂಥ
(A) ಸ್ತ್ರೀವಾದಿ (B) ಮಾರ್ಕ್ಸ್‌ವಾದಿ
(C) ರೂಪನಿಷ್ಠ (D) ರಾಚನಿಕ

17. 'ರಸ್ತೆ' ಪದವು ಈ ಮೂಲದಿಂದ ಬಂದಿದೆ.
(A) ಪರ್ಶಿಯನ್ (B) ಉರ್ದು
(C) ಹಿಂದಿ (D) ಮರಾಠಿ

18. ತತ್ಪುರುಷ ಸಮಾಸಕ್ಕೆ ಇದು ಉದಾಹರಣೆ.
(A) ಒಳ್ಗನ್ನಡ (B) ಕೆಂದಳಿರ್
(C) ಬಡನಡು (D) ಕನ್ನಡವಕ್ಕಿ

19. 'ಅತ್ತಣಿಂ' ವಿಭಕ್ತಿ ಪ್ರತ್ಯಯ
(A) ತೃತೀಯಾ (B) ಸಪ್ತಮಿ
(C) ಚತುರ್ಥೀ (D) ಪಂಚಮಿ

20. ಇದು ಪದಾದಿಯ ಚ>ಕ ಪರಿವರ್ತನೆಗೆ ಉದಾಹರಣೆ.
(A) ಕುಮಾರ (B) ಕಿವಿ
(C) ಕಾಗೆ (D) ಕಣ್ಣು

**ಬಹು ಆಯ್ಕೆಯ ಮಾದರಿ ಪ್ರಶ್ನೆಗಳು :**

21. 'ಫಣದುಳ್ಗಣಿ' ಮತ್ತು 'ಅಳಪಗಣ ಪಶುಪತಿ' – ಈ ಪದಗಳು ಬಳಕೆಯಾಗಿರುವ ಶಾಸನಗಳು
I. ತಮಟಕಲ್ಲು
II. ಬಾದಾಮಿ
III. ಹಲ್ಮಿಡಿ
IV. ಗಂಗಾಧರಂ
(A) I ಮತ್ತು III (B) I ಮತ್ತು II
(C) III ಮತ್ತು IV (D) I ಮತ್ತು IV

22. ಇವರು 11ನೆಯ ಶತಮಾನದ ಕವಿಗಳು.
I. ಶಾಂತಿನಾಥ ಮತ್ತು ದುರ್ಗಸಿಂಹ
II. ದುರ್ಗಸಿಂಹ ಮತ್ತು ನಾಗವರ್ಮ
III. ನಯಸೇನ ಮತ್ತು ಬ್ರಹ್ಮಶಿವ
IV. ಶ್ರೀಧರಾಚಾರ್ಯ ಮತ್ತು ಚಂದ್ರರಾಜ
(A) I ಮತ್ತು II
(B) II ಮತ್ತು IV
(C) II ಮತ್ತು III
(D) I ಮತ್ತು IV

23. 'ಕಪಿಲಸಿದ್ಧ ಮಲ್ಲಿಕಾರ್ಜುನ', 'ಕೂಡಲ ಚನ್ನಸಂಗಮದೇವ', 'ವಿಜಯ ವಿಠಲ' ಮತ್ತು 'ಹಯವದನ' – ಈ ಅಂಕಿತಗಳಿರುವ ವಚನಕಾರರು ಮತ್ತು ಕೀರ್ತನಕಾರರು
I. ಜೇಡರದಾಸಿಮಯ್ಯ ಮತ್ತು ಚನ್ನಬಸವಣ್ಣ
II. ಸಿದ್ಧರಾಮ ಮತ್ತು ಚನ್ನಬಸವಣ್ಣ
III. ಗೋಪಾಲದಾಸರು ಮತ್ತು ಮೋಹನದಾಸರು
IV. ವಾದಿರಾಜ ಮತ್ತು ವಿಜಯದಾಸರು
(A) I ಮತ್ತು III (B) II ಮತ್ತು IV
(C) II ಮತ್ತು III (D) I ಮತ್ತು IV

24. ಇವು ಭಾಮಿನಿ ಷಟ್ಪದಿಯಲ್ಲಿರುವ ಕೃತಿಗಳು.
I. ಶಿವತತ್ವ ಚಿಂತಾಮಣಿ ಮತ್ತು ಜೀವಂಧರ ಚರಿತೆ
II. ಪ್ರಭುಲಿಂಗ ಲೀಲೆ ಮತ್ತು ತೊರವೆ ರಾಮಾಯಣ
III. ಬಸವಪುರಾಣ ಮತ್ತು ಸಾಳ್ವ ಭಾರತ
IV. ಜೈಮಿನಿ ಭಾರತ ಮತ್ತು ಜಯನೃಪ ಕಾವ್ಯ
(A) I ಮತ್ತು II (B) II ಮತ್ತು IV
(C) II ಮತ್ತು III (D) I ಮತ್ತು IV

25. ಇವು ಕಥಾಪ್ರಕಾರಕ್ಕೆ ಸೇರಿದ ಕೃತಿಗಳು.
I. ಎದೆಗೆ ಬಿದ್ದ ಅಕ್ಷರ – ದ್ಯಾವನೂರು
II. ಗಾಂಧಿ ಬಂದ – ಗಾಂಧಿ ಕ್ಲಾಸ್
III. ಕಲ್ಲು ಕರಗುವ ಸಮಯ – ಕಥೆಯಾದಳು ಹುಡುಗಿ
IV. ಕ್ಷಿತಿಜ – ಮುಳ್ಳುಗಳು
(A) III ಮತ್ತು IV
(B) I ಮತ್ತು III
(C) II ಮತ್ತು III
(D) I ಮತ್ತು II



Use E-Papers, Save Trees
above line hide when print out

Scanned with CamScanner

**26.** ಇವುಗಳಲ್ಲಿ ಯಾವುದು ಸರಿಯಾದ ಹೊಂದಾಣಿಕೆ ?

I. ಉತ್ತಂಗಿ ಚೆನ್ನಪ್ಪ – ಅನುಭವ ಮಂಟಪದ ಐತಿಹಾಸಿಕತೆ

II. ಎಂ. ಚಿದಾನಂದಮೂರ್ತಿ – ಶಿವದಾಸ ಗೀತಾಂಜಲಿ

III. ಹಂಪ ನಾಗರಾಜಯ್ಯ – ಸಂಶೋಧನಾ ತರಂಗ

IV. ಎಂ. ಆರ್. ಶ್ರೀ – ವಚನ ಧರ್ಮಸಾರ

(A) I ಮತ್ತು IV (B) II ಮತ್ತು III

(C) II ಮತ್ತು IV (D) I ಮತ್ತು III

**27.** ಇವುಗಳಲ್ಲಿ ಯಾವುದು ಸರಿಯಾದ ಹೊಂದಾಣಿಕೆ ?

I. ಗೌಡಿ – ಲಾಟೀಯಾ

II. ಧ್ವನಿ – ರಸ

III. ಶೌರಸೇನಿ – ವೈದರ್ಭಿ

IV. ವೈದರ್ಭಿ – ಪಾಂಚಾಲಿ

(A) I ಮತ್ತು II (B) I ಮತ್ತು IV

(C) II ಮತ್ತು IV (D) I ಮತ್ತು III

**28.** ಇವುಗಳಲ್ಲಿ ಯಾವುದು ಸರಿಯಾದ ಹೊಂದಾಣಿಕೆ ಅಲ್ಲ ?

I. ಪೋಲಾಳ್ವ ದಂಡನಾಥ – ಹರಚಾರಿತ್ರ

II. ಜನ್ನ – ನೇಮಿನಾಥ ಪುರಾಣ

III. ಚೆನ್ನಬಸವಾಂಕ – ಪ್ರಭುದೇವರ ಪುರಾಣ

IV. ಅಗ್ಗಳ – ಚಂದ್ರಪ್ರಭ ಪುರಾಣ

(A) I ಮತ್ತು IV (B) II ಮತ್ತು IV

(C) I ಮತ್ತು II (D) II ಮತ್ತು III

**29.** ಇವು ಸಂಸ್ಕೃತದಿಂದ ಬಂದ ಶಬ್ದಗಳು.

I. ಗೌಡ ಮತ್ತು ಜಾತ್ರೆ

II. ಕುಪ್ಪಸ ಮತ್ತು ಬೆತ್ತ

III. ಹೆಂಗಸು ಮತ್ತು ಬೆಣ್ಣೆ

IV. ಗುಡಿ ಮತ್ತು ಕಬ್ಬಿಣ

(A) I ಮತ್ತು II (B) II ಮತ್ತು III

(C) I ಮತ್ತು III (D) II ಮತ್ತು IV

**30.** ಇವು ಗುಣಸಂಧಿಗೆ ಉದಾಹರಣೆಗಳು.

I. ತಲೆದೂಗು ಮತ್ತು ಗಿರೀಶ

II. ಚಂದ್ರೋದಯ ಮತ್ತು ಮಹೇಶ

III. ಲೋಕೋತ್ತರ ಮತ್ತು ರಾಜೇಶ್ವರಿ

IV. ದೇವರ್ಷಿ ಮತ್ತು ಏಕೈಕ

(A) I ಮತ್ತು II (B) II ಮತ್ತು III

(C) I ಮತ್ತು III (D) II ಮತ್ತು IV

**ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ :**

ಈ ಕೆಳಗಿನ ಭಾಗವನ್ನು ಓದಿ ಅದನ್ನು ಆಧರಿಸಿದ ಪ್ರಶ್ನೆಗಳಿಗೆ ಉತ್ತರಿಸಿ.ಸರಿಯಾದ ಉತ್ತರಗಳ ಸಂಜ್ಞೆಗಳನ್ನು ನಿಗದಿತ ಸ್ಥಳದಲ್ಲಿ ಗುರುತಿಸಿ. (31 ನೆಯ ಪ್ರಶ್ನೆಯಿಂದ 35 ನೇ ಪ್ರಶ್ನೆಯವರೆಗೆ)

ಈ ಲೋಕದೊಳ್ ಮೂವರ್ ಮೂರ್ಖರಂ ಕಂಡೆನೆಂದೊಡೆ
ಚಾಣಾಕ್ಯನ ವರಾರಬ್ಬಾಯೆಂದು ಬೆಸಗೊಂಡೊಡಾಕೆಯೆಂದಳ್
ನೀನುಂ ನಂದನುಂ ಚಾಣಾಕ್ಯನುಮೆಂದು
ಪೇಳ್ದೊಡಾನೆಂತು ಮೂರ್ಖನೆಂದು ಬೆಸಗೊಂಡೊಡೆ
ಮಗನೆ ಬುದ್ಧಿಯೊಡೆಯೊನ್ ಬಿಸಿಯಂಬಲಿಯಂ ಕಂಚಿನ
ಕಡೆಕಡೆಯೊಳ್ ಕಿರು ಕಿರುದನೆರುಸುತ್ತಮುಣ್ಬುಂ
ನೀನುಂತುಣಲರುಯದುದ(ಅ)ರಿಂ ಮೂರ್ಖನೆನೆ
ನಂದನೇಂ ಮೂರ್ಖನೆಂದೊಡೆ ನಂದನೆಂದೊಡಂ
ಮಹಾಪದ್ಮನೆಂದೊಡಮೊರ್ವನ ಪೆಸರ(ಅ)ತಂ ತನ್ನ
ಕೊಟ್ಟ ದಾನಮಂ ಕುಡದುದರಿಂ ಪಗೆಗೊಂಡು
ಪೋಪನಂತನ್ನಾರ್ಪಂದೆ ಕೊಲ್ಲದುದರಿಂದಂ ನಂದಂ
ಮೂರ್ಖಂ ಚಾಣುಕ್ಯನೆಂತು ಮೂರ್ಖಂ
ನೆಂದೊಡಿಂತೆಂದಳ್ ಚಾಣಾಕ್ಯಂ ತನ್ನ ಮುಳಿಸನೆ ನೋಳ್ಕುಂ
ಕಜ್ಜಮನರಿಯಂ ಮೂಲತಂತ್ರಮನೊಡೆಯನುಂ
ಕ್ಷತ್ರಿಯನುಮಲ್ಲಂ ಪೃಥ್ವೀಶ್ವರನೊಡನೆ ಕಾದಲ್
ಬರ್ಕುಮಾತಂಗೆ ಬುದ್ಧಿಯುಳ್ಳೊಡೆ ತನ್ನ ಪಗೆವನ ನಾಡಂ
ಕಿಡಿಸುವುದು ಪ್ರತಿಪಕ್ಷಮಂ ತನಗೆ ಮಾಡುವುದು ಸಾಮಂತ
ಮಹಾಸಾಮಂತರ್ಕಳಂ ದ್ರವ್ಯಮಂ ಕೊಟ್ಟು ಭೇದಿಸುವುದು
ತತ್ಸಂಬಂಧಿಗಳಂ ಪ್ರತಿಪಕ್ಷದಿಂದಂ ಕಿಡಿಸುವುದುಮಿಂತು
ಮಾಡಿದೊಡೆ ನೃಪತಿಯೊರ್ವನೆಯುಳಿಗುಮಾಗಳ್ ತನ್ನ
ಬಗೆದ ಕಾರ್ಯ ಸಿದ್ಧಿಯಕ್ಕುಮೆಂದೊಡಬ್ಬಾ ನಿಮ್ಮ ಪೇಳ್ದಂತುಟೆ
ಕಜ್ಜಮೆಂದುಂಡು ಪೊರಮಟ್ಟು ಶ್ರೀ ಪರ್ವತಕ್ಕೆ ಪೋಗಿ
ಪಿರಿದು ತಂತ್ರಮಂ ಮಾಡಿ ಸಾಲಿಗರ ಬಿರ್ದಿಯ ಪೇಳ್ದಂತೆ
ನಂದನ ನಾಡಂ ಕಿಡಿಸಿ ಸಾಮಂತ ಮಹಾಸಾಮಂತರ್ಕಳಂ
ದ್ರವ್ಯದಿಂ ಭೇದಿಸಿ ತತ್ಪ್ರತಿ ಪಕ್ಷಮಂ ತನ್ನಂತೆ ಮಾಡಿ
ತತ್ಸಂಬಂಧಿಗಳಂ

ಪ್ರತಿಪಕ್ಷದಿಂದಂ ಕಿಡಿಸಿ ನಂದನೊರ್ವನೆ ಉಳಿದಾಗಳ್
ಚಂದ್ರಭುಕ್ತಂ ಬೆರಸು ಸಮಸ್ತ ಬಲಮೆಲ್ಲಮಂ
ಕೂಡಿಕೊಂಡುಮೇಲೆರ್ದು ಕಾದುವಾಗಳ್ ಮಹಾಪದ್ಮನ
ಸಾಮಂತ ಮಹಾಸಾಮಂತರೊಡ್ಡಣಮನೊಡ್ಡಿರ್ದೊರಂ
ಕಾದವೇಳ್ದೊಡಂ ಕಾದಲೊಲ್ಲದೆ ಕೆಮ್ಮಗಿರೆ ಮಹಾಪದ್ಮಂ
ಭೇದಕ್ಕೆ ಪಡೆ ಸಂದುದೆಂಬುನರಿದಂಜಿ



Use E-Papers, Save Trees
above line hide when print out

Scanned with CamScanner

ಯಾರುಮರಿಯದಂತಿರೆ ಓಡಿ ಕೆಟ್ಟಂ ಮತ್ತಿತ್ತ ಸುಂಬಂಧು
ಪಿರಿದು ಬೇಗಂ ಕಾಳೆಗಮಂ ಕಾದಿ ಸೋಲ್ತೊಡಾತನಂ
ಪಿಡಿದು ಕಟ್ಟಿ ಸಂಕಲೆಯನಿಕ್ಕಿ ಸೆರೆಯೊಳಿಟ್ಟಂ

ಮತ್ತೆ ಚಾಣಾಕ್ಯಂ ಕಾಳೆಗಮಂ ಗೆಲ್ದು ಪಾಟಳೀಪುತ್ರಮಂ
ಪೊಕ್ಕು ಮಹಾಪದ್ಮನರಸಿಯರ್ಕಳ್ಗಂ ಭಂಡಾರಕ್ಕಂ ಕಾಪನಿಟ್ಟು
ಪೊಳಲ ಪ್ರಜೆಯಂ ಸಂತೈಸಿ ಮತ್ತಂ ಪ್ರಶಸ್ತ ದಿನವಾರ ನಕ್ಷತ್ರ
ಮೂಹೂರ್ತದೊಳ್ ಚಂದ್ರಭುಕ್ತಂಗೆ ರಾಜ್ಯಾಭಿಷೇಕಂಗೆಯ್ದು
ಪಟ್ಟಂಗಟ್ಟಿ ಮಹಾಪದ್ಮನರಸಿ ಚಂದ್ರಮತಿ ಮಹಾದೇವಿಯಂ
ಚಂದ್ರಭುಕ್ತಂಗೆ ಮಹಾದೇವಿಮಾಡಿ ಮತ್ತೆ
ನಂದನಭಂಡಾರದೊಳಂ ತಮ್ಮ ಭಂಡಾರದೊಳಂ
ದ್ರವ್ಯಮಿಲ್ಲದುದನರಿದು ಪಾಟಳಿಪುತ್ರದ ಪ್ರಜೆಗಳಂ ನಾಡ
ಪ್ರಜೆಗಳಂ ಬಳಿಯಟ್ಟಿ ಬರಿಸಿಯವರ್ಗೆಲ್ಲಮುಣಿಸಂ ಮಾಡಿ
ಸೊರ್ಕಪ್ಪಾಹಾರಮನೂಡಿ ನಿಮ್ಮ ನಿಮ್ಮ ದ್ರವ್ಯಂಗಳಿರ್ದೆಡೆಯಂ
ತೋರಿಮೆಂದುಬೆಸಗೊಂಡೊಡವರ್ಗಳ್ ಸೊರ್ಕಿ
ಮೆಯ್ಯರಿಯದನಿಬರುಂ ತಂತಮ್ಮ ದ್ರವ್ಯದೆಡೆಗಳಂ ತೋರಿ
ಪೇಳ್ದು ಕೊಟ್ಟರಿಂತನೇಕ ಸಹಸ್ರ ಕೋಟಿ ದ್ರವ್ಯಮಂ
ಚಾಣಾಕ್ಯಂ ಪಡೆದು ಚಂದ್ರಭುಕ್ತಂಗೆ ತೋರಿ ಭಂಡಾರಮಂ
ತೀವಿಯರಮನೆಯ ಮುಂದಣಂಗಣದೊಳ್ ಇಂತೆಂದು
ಪೇಳ್ದಾಡಿದಂ ಪನ್ನೆರಡು ವರ್ಷದಿಂದಂ ನಂದನ ವಂಶಮಂ
ನಿರ್ಮೂಲಂ ಮಾಡಿ ಕಿಡಿಸುವೆನೆಂದೆನ್ನ ಪೂಣ್ದ ಪ್ರತಿಜ್ಞೆ
ನೆರೆದತ್ತು ಮತ್ತೆನಗೆ ಜಾದಿನೊಳೂಡಿದವೆರಡು ವಸ್ತ್ರಮೊಳವು
ಪೊನ್ನಗುಂಡಿಗೆಯುಮುಂಟು ಮೂರುದಂಡಮುಮೊಳವು
ಮಗಧೆನಾಡ ದ್ರವ್ಯಮೆಲ್ಲಮಂ ತಂದು ಭಂಡಾರಮಂ
ತೀವಿದೆಂ ಗುಣವಿಶೇಷಮನರಿವರಸನುಮೆನಗೆ ಬಸಮಾದಂ
ಪೊಡೆ ಪರೆಯನೆಂದು ಪರೆಯಂ ಪೊಯ್ದಿಯೊಸೆದು ರಾಗಿಸಿ
ತ್ರಿದಂಡಮನೆತ್ತಿ ಸೊರ್ಕಿದ ಪ್ರಜೆವೆರಸು
ಲಟಹದಿಂದಾಡಿದೊಂ ಮತ್ತಂ ಶ್ರೀಪರ್ವತದೊಳಿರ್ದ ತನ್ನ
ಪಾರ್ವಂತಿ ಯಶೋಮತಿಗೆ ಬಿಳಿಯಟ್ಟಿ
ಬರಿಸಿಯಾಕೆಯೊಡನೆಭೋಗೋಪಭೋಗಂಗಳನುಭವಿಸುತ್ತಂ
ಸಾಮಂತ ಮಹಾಸಾಮಂತರ್ಕಳ್ಗಂ ಜೀವಿತಂಗೆಯ್ದು
ತಳವರ್ಗಮುಮಂ ಸಂತವಿಸಿ ಮಗಧವಿಷಯಮನಾಳುತ್ತಮಿಷ್ಟ
ವಿಷಯ ಕಾಮಭೋಗಂಗಳನನುಭವಿಸುತ್ತಂ ಪಲಕಾಲಂ
ಸಲೆ

ಮತ್ತಂ ಚಂದ್ರಮತಿ ಮಹಾಮತಿ ಮಹಾದೇವಿಗೆ
ಗರ್ಭಮಾಗಿಯೊಂದು ದಿವಸಂ ರಥಮನೇರಿದೊಡಾ
ರಥದ ಚಕ್ರದ ಪತ್ತುಂ ಕದಿರ್ಗಳ್ ನೆಲದೊಳರ್ದುದಂ
ಚಾಣಾಕ್ಯಂ ಕಂಡೀಚಂದ್ರಭುಕ್ತಂ ಮೊದಲಾಗಿ
ಪೃಥ್ವಿಯನೇಕಚ್ಛತ್ರಚ್ಛಾಯೆಯಿಂ
ದಶಮಯೂರರ್ಕಳಾಳ್ವರೆಂದಾದೇಶಂಗೆಯ್ದಂ ಮತ್ತೆ ಕೆಲವು
ದಿವಸದಿಂ ಚಂದ್ರಮತಿ ಮಹಾದೇವಿಗೆ
ನವಮಾಸಂನೆರೆದೊಂದು ದಿವಸಮರಸಂ ನಂಜಿನೊಳ್
ಬೆರಸಿದಾಹಾರಮನುಣ್ಬಾಗಳ್ ಪಕ್ಕದಿರ್ದರಸಿಗೆ
ಅರಸನೊಡನುಣ್ಬ ಬಯಕೆಯಾದೊಡೆ ಬಾಳಂಕಿಳ್ತು
ನಿಮಿರ್ದು ಪಕ್ಕದಿರ್ದ ಚಾಣಾಕ್ಯನ ದೃಷ್ಟಿಯಂ ಬಂಚಿಸಿ
ಪ್ರಚ್ಛನ್ನದಿಂದಂ ತನ್ನ ಕೆಯ್ಯ ತುತ್ತನರಸಂ
ವಿಷಮಿಶ್ರಮೆಂದರಿಯದೆ ಕೊಟ್ಟನದನಾಕೆ ಬಾಯೊಳಿಟ್ಟಾಗಳೆ
ಚಾಣಾಕ್ಯಂ ಕಂಡು ತಲೆಯಂ ಪೋಗಿರಿದು ಬಸಿರಂ ಪೋಳ್ದು
ಕೂಸಂ ಪೊರಮಡಿಸುವುದಂ ಕಂಡು ಹಾ ಅಯ್ಯೋ ಎನ್ನ
ಚಂದ್ರಮತಿ ಮಹಾದೇವಿ ಎನ್ನನಲ್ಲಳೆಯೆಂದು
ಪ್ರಳಾಪಂಗೆಯ್ದು ದುಃಖಾಕ್ರಾಂತನಾಗಿ ತದ್ವಿಯೋಗದಿಂ
ಚಂದ್ರಭುಕ್ತಂ ಪ್ರಾಣ

ಪರಿತ್ಯಾಗಂಗೆಯ್ದಂ ಮತ್ತಾ ಕೂಸಿನ ತಲೆಯೊಳಿನಿಸಾನುಂ
ವಿಷಬಿಂದು ಪನಿತುದರಿಂದಾತಂಗೆ ಬಿಂದುಸಾಗರನೆಂದು
ಪೆಸರನಿಟ್ಟು ಪಟ್ಟಂಗಟ್ಟಿ ಕೂಸಂ ತೋರಿಯರಸುಗೆಯ್ಯುತ್ತಂ
ಕಾಲಂ ಸಲೆ.

**31.** ಮೂರ್ಖರ ಹೆಸರು.

(A) ಸಾಮಂತ, ಮಹಾನಾಯಕ

(B) ಚಾಣಾಕ್ಯ , ನಂದನ

(C) ನೃಪತಿ, ಚಂದ್ರಮತಿ

(D) ಬಿಂದುಸಾರ, ಚಂದ್ರಮತಿ

**32.** ಚಾಣಾಕ್ಯನ ಪ್ರತಿಜ್ಞೆಯು

(A) ಸಂಬಂಧವನ್ನು ಸೋಲಿಸುವುದು

(B) ನಂದವಂಶ ನಿರ್ಮೂಲ ಮಾಡುವುದು

(C) ಚಂದ್ರಭುಕ್ತನಿಗೆ ಪಟ್ಟಕಟ್ಟುವುದು

(D) ಮಣ್ಣನ್ನು ಹೊನ್ನು ಮಾಡುವುದು



Use E-Papers, Save Trees
above line hide when print out

Scanned with CamScanner

33. ಚಂದ್ರಮತಿಯು ಅವಸಾನ ಹೊಂದಿದ್ದು
(A) ವಿಷದಿಂದ ಕೂಡಿದ ಊಟವನ್ನು ಮಾಡಿ
(B) ವಿಷದಿಂದ ಕೂಡಿದ ತುತ್ತನ್ನು ಅರಸನ ಮೂಲಕ ತಿಂದು
(C) ಹೊಟ್ಟೆಯಿಂದ ಮಗು ಹೊರಗೆ ಬಂದು
(D) ತಲೆ ಒಡೆದು ಹೋಳಾಗಿ ಹೋಗಿದ್ದರಿಂದ

34. ಬಿಂದುಸಾಗರನಿಗೆ ಆ ಹೆಸರು ಬಂದಿದ್ದು
(A) ವಿಷದ ಹನಿ ತಲೆಯ ನೆತ್ತಿಯಲ್ಲಿ ಬಿದ್ದುದರಿಂದ
(B) ಸಾಗರದಂತೆ ನೀರಿನ ಹನಿಗಳನ್ನು ಕುಡಿದಿದ್ದರಿಂದ
(C) ವಿಷವನ್ನು ತಾಯಿಯ ಮೂಲಕ ಕುಡಿದಿದ್ದರಿಂದ
(D) ಸಣ್ಣ ಮಗುವಾಗಿದ್ದಾಗ ವಿಷ ಕುಡಿದಿದ್ದರಿಂದ

35. ಯಾರ ಭಂಡಾರದಲ್ಲಿ ಸಂಪತ್ತು ಇಲ್ಲವೆಂದು ಚಾಣಾಕ್ಯನು ಅರಿತನು ?
(A) ನಂದ ಮಹಾರಾಜನ ಭಂಡಾರದಲ್ಲಿ
(B) ನಂದ ಮಹಾರಾಜ ಮತ್ತು ಚಂದ್ರಭುಕ್ತನ ಭಂಡಾರದಲ್ಲಿ
(C) ಮಗಧ ವಿಷಯದಲ್ಲಿ
(D) ಶ್ರೀ ಪರ್ವತದಲ್ಲಿ ಮಣ್ಣನ್ನು ಹೊನ್ನು ಮಾಡುವ ಸ್ಥಳದಲ್ಲಿ

**ಹೇಳಿಕೆ – ವಿವರಣೆ ಆಧಾರಿತ ಬಹು ಆಯ್ಕೆಯ ಮಾದರಿ :**

36. **ಹೇಳಿಕೆ :** 'ನಾಣ್ನುಡಿ ದೇಶಿವೆತ್ತ ಪೊಸನುಡಿ ಮಾರ್ಗಂ'
**ವಿವರಣೆ :** ನಾಣ್ನುಡಿ, ದೇಶಿ, ಹೊಸನುಡಿ – ಇದೇ ಮಾರ್ಗ.
(A) ಹೇಳಿಕೆ ಸರಿ, ವಿವರಣೆ ಸರಿ
(B) ಹೇಳಿಕೆ ಸರಿ, ವಿವರಣೆ ತಪ್ಪು
(C) ಹೇಳಿಕೆ ತಪ್ಪು, ವಿವರಣೆ ತಪ್ಪು
(D) ಹೇಳಿಕೆ ತಪ್ಪು, ವಿವರಣೆ ಸರಿ

37. **ಹೇಳಿಕೆ :** ಮರಣವೇ ಮಹಾನವಮಿ.
**ವಿವರಣೆ :** ಮಹಾನವಮಿ ದಿನದಂದೇ ಮರಣಿಸಬೇಕು.
(A) ಹೇಳಿಕೆ ಸರಿ, ವಿವರಣೆ ತಪ್ಪು
(B) ಹೇಳಿಕೆ ತಪ್ಪು, ವಿವರಣೆ ಸರಿ
(C) ಹೇಳಿಕೆ ಸರಿ, ವಿವರಣೆ ಸರಿ
(D) ಹೇಳಿಕೆ ತಪ್ಪು, ವಿವರಣೆ ತಪ್ಪು

38. **ಹೇಳಿಕೆ :** ''ತದಾದೋಕ್ತೌ ಶಬ್ದಾರ್ಥೌ ಸಗುಣವನಲಂಕೃತಿ ಪುನಃ ಕ್ವಾಪಿ''
**ವಿವರಣೆ :** ''ಕಾವ್ಯವು ದೋಷ ರಹಿತವಾದ ಗುಣ ಸಹಿತವಾದ ಶಬ್ದಾರ್ಥಗಳನ್ನುಳ್ಳದ್ದು, ಇಲ್ಲಿ ಕೆಲವು ವೇಳೆ ಅಲಂಕಾರಿಕಗಳಿಲ್ಲದಿರುವುದೂ ಉಂಟು''.
(A) ಹೇಳಿಕೆ ತಪ್ಪು, ವಿವರಣೆ ಸರಿ
(B) ಹೇಳಿಕೆ ತಪ್ಪು, ವಿವರಣೆ ತಪ್ಪು
(C) ಹೇಳಿಕೆ ಸರಿ, ವಿವರಣೆ ತಪ್ಪು
(D) ಹೇಳಿಕೆ ಸರಿ, ವಿವರಣೆ ಸರಿ

39. **ಹೇಳಿಕೆ :** ಮುಗಿಲಿಗೆ ರೆಕ್ಕೆಗಳೊಡದವೋ ಅಣ್ಣ.
**ವಿವರಣೆ :** ಮುಗಿಲಿಗೆ ರೆಕ್ಕೆಗಳು ಹೊಡೆದವು.
(A) ಹೇಳಿಕೆ ಸರಿ, ವಿವರಣೆ ತಪ್ಪು
(B) ಹೇಳಿಕೆ ತಪ್ಪು, ವಿವರಣೆ ತಪ್ಪು
(C) ಹೇಳಿಕೆ ತಪ್ಪು, ವಿವರಣೆ ಸರಿ
(D) ಹೇಳಿಕೆ ಸರಿ, ವಿವರಣೆ ಸರಿ

40. **ಹೇಳಿಕೆ :** ''ಸಂದ ಪಕಾರಕ್ಕೆ ಹಕಾರಂದೊರೆಗೊಳ್ಗುಂ ವಿಕಲ್ಪದಿಂ ಸಂಯೋಗಂ''.
**ವಿವರಣೆ :** 'ಪ' ಕಾರ 'ಹ' ಕಾರಗಳು ಸಂಯೋಗ ರೂಪಗಳು.
(A) ಹೇಳಿಕೆ ಸರಿ, ವಿವರಣೆ ತಪ್ಪು
(B) ಹೇಳಿಕೆ ಸರಿ, ವಿವರಣೆ ಸರಿ
(C) ಹೇಳಿಕೆ ತಪ್ಪು, ವಿವರಣೆ ಸರಿ
(D) ಹೇಳಿಕೆ ತಪ್ಪು, ವಿವರಣೆ ತಪ್ಪು

41. ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಿಕೆಯಾಗುತ್ತದೆ ?
(A) ಚಾವುಂಡರಾಯನ ತ್ರಿಷಷ್ಠಿ ಶಲಾಕಾ ಪುರುಷ ಪುರಾಣ – ಚಂಪೂ
(B) ಚಂದ್ರರಾಜನ ಮದನ ತಿಲಕ – ಚಂಪೂ
(C) ಶಿಶುಮಾಯಣನ ಅಂಜನಾ ಚರಿತೆ – ಶತಕ
(D) ಕರ್ಣಪಾರ್ಯನ ನೇಮಿನಾಥ ಪುರಾಣ – ಷಟ್ಪದಿ

42. ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಾಣಿಕೆಯಾಗುವುದಿಲ್ಲ ?
(A) ಚಾವುಂಡರಾಯ – ಗಂಗರ ರಾಚಮಲ್ಲ
(B) ದುರ್ಗಸಿಂಹ – ಜಗದೇಕಮಲ್ಲ
(C) ನಾಗಚಂದ್ರ – 1ನೇ ಬಲ್ಲಾಳ
(D) ಲಕ್ಕಣ್ಣ ದಂಡೇಶ – ಶ್ರೀ ಕೃಷ್ಣದೇವರಾಯ



@raghu
Use E-Papers, Save Trees
above line hide when print out
Scanned with CamScanner

@raghu



43. ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಾಣಿಕೆಯಾಗುತ್ತದೆ?
(A) ಗುಬ್ಬಿಯ ಮಲ್ಲಣ್ಣಾರ್ಯ – ವೀರಶೈವಾಮೃತ ಮಹಾಪುರಾಣ
(B) ಮಂಗರಸ – ದ್ವಾದಶಾನುಪ್ರೇಕ್ಷೆ
(C) ನಂಜುಂಡ ಕವಿ – ಕೆಳದಿ ನೃಪವಿಜಯ
(D) ಮಹಲಿಂಗರಂಗ – ಅನುಭವಸಾರ

44. ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಾಣಿಕೆಯಲ್ಲ?
(A) ಪು.ತಿ.ನ. – ಶ್ರೀ ಹರಿ ಚರಿತೆ
(B) ಅವಧೇಶ್ವರಿ – ವಿ. ಕೃ. ಗೋಕಾಕ್
(C) ಚಿತ್ರಗಳು ಪತ್ರಗಳು – ಎ. ಎನ್. ಮೂರ್ತಿರಾವ್
(D) ಜೀವಧ್ವನಿ – ಚೆನ್ನವೀರ ಕಣವಿ

45. ಕೆಳಗಿನ ಜೋಡಿಗಳಲ್ಲಿ ಯಾವುದು ತಪ್ಪು ಹೊಂದಾಣಿಕೆಯಾಗುತ್ತದೆ?
(A) ಸಿ. ಡಿ. ಲೂಯಿ – ಕಾವ್ಯಪ್ರತಿಮೆ
(B) ಟಿ. ಎಸ್. ಎಲಿಯಟ್ – ವಸ್ತು ಪ್ರತಿರೂಪ
(C) ಕ್ರೋಚೆ – ವ್ಯಕ್ತಿತ್ವ ನಿರಸನ
(D) ಕೋಲ್‌ರಿಜ್ – ಲಘು ಕಲ್ಪನೆ

**ಬಹು ಆಯ್ಕೆಯ ಜೋಡಣೆ**

46. ಇವು ಹೆಚ್. ತಿಪ್ಪೇರುದ್ರಸ್ವಾಮಿಯವರ ಕೃತಿಗಳು.

| | |
|---|---|
| a. ತಪೋರಂಗ | 1. ಕಾದಂಬರಿ |
| b. ಕದಳಿಯ ಕರ್ಪೂರ | 2. ನಾಟಕ |
| c. ನಿಜಗುಣ ಶಿವಯೋಗಿ | 3. ಕವನ ಸಂಕಲನ |
| d. ಪ್ರಸಾದ | 4. ವಿಮರ್ಶೆ |
| | 5. ಸಂಪಾದನೆ |

ಇವುಗಳಿಗೆ ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | 3 | 1 | 2 | 5 |
| (B) | 3 | 1 | 2 | 4 |
| (C) | 3 | 1 | 5 | 2 |
| (D) | 2 | 3 | 5 | 4 |

47. ಬಹು ಆಯ್ಕೆಯ ಜೋಡಣೆ

| | |
|---|---|
| a. ಪ್ರತಿಭೆ | 1. ಸಾಧಾರಣೀಕರಣ |
| b. ಮಾನಸಿಕ ದೂರ | 2. ಸ್ವಭಾವೋಕ್ತಿ |
| c. ವಾಸ್ತವತಾವಾದ | 3. ಮೆಟಫರ್ |
| d. ಪ್ರತಿಮೆ | 4. ಇಮ್ಯಾಜಿನೇಷನ್ |
| | 5. ಇಮೇಜ್ |

ಇವುಗಳಿಗೆ ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | 4 | 2 | 1 | 5 |
| (B) | 5 | 4 | 2 | 3 |
| (C) | 2 | 1 | 4 | 5 |
| (D) | 4 | 1 | 2 | 5 |

ಈ ಕೆಳಗಿನವುಗಳಲ್ಲಿ ಸರಿಯಾದ ಕಾಲಾನುಕ್ರಮಣಿಕೆಯನ್ನು ಗುರುತಿಸಿ.

48. (A) ಬಸವಪುರಾಣ, ಶಿವತತ್ವಚಿಂತಾಮಣಿ, ಚೆನ್ನಬಸವ ಪುರಾಣ, ಶಬರಶಂಕರ ವಿಳಾಸ
(B) ಶಬರಶಂಕರ ವಿಳಾಸ, ಬಸವಪುರಾಣ, ಚೆನ್ನಬಸವ ಪುರಾಣ, ಶಿವತತ್ವಚಿಂತಾಮಣಿ
(C) ಬಸವಪುರಾಣ, ಶಿವತತ್ವಚಿಂತಾಮಣಿ, ಶಬರಶಂಕರ ವಿಳಾಸ, ಚೆನ್ನಬಸವ ಪುರಾಣ
(D) ಚೆನ್ನಬಸವ ಪುರಾಣ, ಶಿವತತ್ವಚಿಂತಾಮಣಿ, ಶಬರಶಂಕರ ವಿಳಾಸ, ಬಸವಪುರಾಣ

49. (A) ಪೊನ್ನ, ನೇಮಿನಾಥ, ವಿಜಯಣ್ಣ, ರತ್ನಾಕರವರ್ಣಿ
(B) ವಿಜಯಣ್ಣ, ರತ್ನಾಕರವರ್ಣಿ, ಪೊನ್ನ, ನೇಮಿನಾಥ
(C) ರತ್ನಾಕರವರ್ಣಿ, ಪೊನ್ನ, ವಿಜಯಣ್ಣ, ನೇಮಿನಾಥ
(D) ನೇಮಿನಾಥ, ಪೊನ್ನ, ರತ್ನಾಕರವರ್ಣಿ, ವಿಜಯಣ್ಣ

50. (A) ಕನಕದಾಸ, ಕೈವಾರ ನಾರಾಯಣಪ್ಪ, ಕಡಕೋಳ ಮಡಿವಾಳಪ್ಪ, ಶಿಶುನಾಳ ಶರೀಫ
(B) ಕೈವಾರ ನಾರಾಯಣಪ್ಪ, ಕನಕದಾಸ, ಶಿಶುನಾಳ ಶರೀಫ, ಕಡಕೋಳ ಮಡಿವಾಳಪ್ಪ
(C) ಕೈವಾರ ನಾರಾಯಣಪ್ಪ, ಕನಕದಾಸ, ಕಡಕೋಳ ಮಡಿವಾಳಪ್ಪ, ಶಿಶುನಾಳ ಶರೀಫ
(D) ಕನಕದಾಸ, ಕಡಕೋಳ ಮಡಿವಾಳಪ್ಪ, ಶಿಶುನಾಳ ಶರೀಫ, ಕೈವಾರ ನಾರಾಯಣಪ್ಪ



Use E-Papers, Save Trees
above line hide when print out

Scanned with CamScanner

Total Number of Pages : 8

ಚಿತ್ತು ಬರಹಕ್ಕಾಗಿ ಸ್ಥಳ

Space for Rough Work

@raghu



Use E-Papers, Save Trees
above line hide when print out

Scanned with CamScanner